ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, the 20th June 1972/Jyeishta 30, 1894 (Saka).

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

Free distribution of House Sites to Houseless Families

4. Sri S. KARIAPPA (Kanakapura).—

Will the Minister for Municipal Administration be pleased to state :—

(*a*) whether there is any scheme under which Government can make free distribution of house sites in rural parts for the houseless families ;

(*b*) if so, whether under this scheme Government can allow poor people to occupy and errect houses on Government waste lands ?

Sri B. BASAVALINGAPPA (Minister for Municipal Administration).–

(*a*) Yes.

(*b*) No.

ಶ್ರೀ ಎಸ್. ಕರಿಯಪ್ಪ.—ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳು ಇಲ್ಲದ ಜನರ ಸಂಖ್ಯೆ ಎಷ್ಟು ಇದೆಯೆಂಬುದರ ಅಂಕಿಅಂಶಗಳು ಏನಾದರೂ ಇವೆಯೇ ?

† ಶ್ರೀ ಬಿ. ಬಸವಲಿಂಗಪ್ಪ.—ಸುಮಾರು 30 ಸಾವಿರ ಸಂಸಾರಗಳು ಎಂದು ಅಂದಾಜು ಮಾಡಬಹುದು.

---

† Indicates that the remarks or speeches have not been revised by the member concerned.

ಶ್ರೀ ಎಸ್. ಕರಿಯಪ್ಪ.— ಇದರಲ್ಲಿ ಎಷ್ಟು ಜನರಿಗೆ ಮನೆ ನಿವೇಶನಗಳನ್ನು ಕೊಡಲು ಸರ್ಕಾರ ಅಂದಾಜು ಮಾಡಿದೆ ಮತ್ತು ಇದರ ಬಗ್ಗೆ ಯಾವ್ಯಾವ ಯೋಜನೆಗಳನ್ನು ಸರ್ಕಾರದವರು ಹಾಕಿ ಕೊಂಡಿದ್ದಾರೆ?

ಶ್ರೀ ಬಿ. ಬಸವಲಿಂಗಪ್ಪ.— ನಾಲ್ಕನೆಯ ಯೋಜನೆಯಲ್ಲಿಯೂ ಮನೆ ನಿವೇಶನಗಳನ್ನು ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಈಗ ಮೊದಲನೆಯದಾಗಿ ಸರ್ಕಾರಿ ಜಮೀನು ಎಲ್ಲೆಲ್ಲಿದೆಯೋ ಅಲ್ಲಿ ಇಂತಹ ಜನರಿಗೆ ಮನೆಗಳ ನಿವೇಶನಗಳನ್ನು ಕೊಡಬೇಕೆಂದು ಮಾಡಿದೆ; ಮತ್ತು ಅರಣ್ಯ ಊರಿನ ಹಕ್ಕದಲ್ಲಿ ಇದ್ದರೆ ಅಲ್ಲಿ ಕೂಡ ಸೈಟ್‌ಗಳನ್ನು ಕೊಡಬೇಕೆಂದು ತೀರ್ಮಾನವಾಗಿದೆ. ಇದಲ್ಲದೆಗ್ರಾಮ ಠಾಣದ ಜಮೀನುಗಳನ್ನೂ ಸಹ ಇದಕ್ಕೆ ಉಪಯೋಗಿಸಿಕೊಳ್ಳುವ ಯೋಜನೆ ಇದೆ.

ಶ್ರೀ ಎಸ್. ಕರಿಯಪ್ಪ.—ಇದರಿಂದ ಒಟ್ಟು ಜಮೀನು ಎಷ್ಟು ಆಗಬಹುದು ಎಂದು ಅಂದಾಜು ಹಾಕಿಕೊಂಡಿದ್ದೀರಿ?

ಶ್ರೀ ಬಿ. ಬಸವಲಿಂಗಪ್ಪ.— ಕೇಂದ್ರ ಸರ್ಕಾರದ ನೀತಿ ಪ್ರಕಾರ 100 ಕ್ಕೆ 100 ಭಾಗ ಈ ಸ್ಕೀಮಿಗೆ ಹಣ ಕೇಂದ್ರದವರು ಕೊಡುವುದರಿಂದ ಇದರಲ್ಲಿ ಎಷ್ಟು ಜನರಿಗೆ ಕೊಡುವುದಕ್ಕೆ ಆಗುತ್ತದೆ ಎಂದು ತಕ್ಷಣ ಹೇಳುವುದಕ್ಕಾಗುವುದಿಲ್ಲ. ನಮ್ಮ ದೇಶದಲ್ಲಿ ಯಾರ್ಯಾರಿಗೆ ನಿವೇಶನ ಇಲ್ಲ ಅಂಥ ವರಿಗೆ ನಿವೇಶನಗಳನ್ನು ಕೊಡಬೇಕೆಂಬ ನಿಯಮ ಇದೆ. ಈಗ ನಮ್ಮಲ್ಲಿ ನುಮಾರು ಎರಡೂವರೆ ಕೋಟಿ ರೂಪಾಯಿಯಷ್ಟು ಅಂದಾಜು ಇದೆ. ಅದನ್ನು ನಾವು ಉಪಯೋಗಿಸಿಕೊಂಡು ಇದರಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ತಮ್ಮ ಯೋಜನೆಯ ಪ್ರಕಾರ 30 ಫೀಟ್— 60 ಫೀಟ್ ಸೈಟ್ ಕೊಡಬೇಕೆಂದು ನಿರ್ದೇಶನ ಕೊಟ್ಟಿದ್ದೀರಿ. ಆದರೆ ಈಗಾಗಲೇ ಗ್ರಾಮಾಂತರ ಪ್ರದೇಶ ಗಳಲ್ಲಿ ಮೂರು ಗುಂಟೆ ಜಮೀನನ್ನು ಮನೆ ನಿವೇಶನಕ್ಕಾಗಿ ಪಡೆಯುವುದಕ್ಕೆ ಸರ್ಕಾರದ ಅಜ್ಞೆ ಉಂಟು. ಆ ಕಾರಣದಿಂದ ಈ 30 ಅಡಿ— 60 ಅಡಿ ವಿಸ್ತೀರ್ಣದ ಜಮೀನನ್ನು ಕೊಡುವುದರ ಬದಲು ಗ್ರಾಮಾಂತರ ಪ್ರದೇಶಗಳಲ್ಲಿ ಮೂರು ಗುಂಟೆ ಜಮೀನನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.— ಅದು ವಾಸ್ತವವಾಗಿರತಕ್ಕಂತಹ ಪ್ರಶ್ನೆಯಾಗಿದೆ. ಇಂಡಿಯಾ ಸರ್ಕಾರದವರು ನುಮಾರು 100 ಚದರಗಜ ಕೊಡಬೇಕೆಂದು ಆದೇಶ ಕೊಟ್ಟಿದ್ದಾರೆ. ಆದರೆ ಅದನ್ನು ಪರಿಶೀಲನೆ ಮಾಡಿ ನೋಡಿದರೆ ರೈತನಿಗೆ ಬೇಕಾಗಿರತಕ್ಕದ್ದು ಮೇವು ಇಟ್ಟುಕೊಳ್ಳುವುದಕ್ಕೆ, ಕಾಳು ಇಟ್ಟುಕೊಳ್ಳುವುದಕ್ಕೆ—ಇತ್ಯಾದಿಗಳಿಗೆ 100 ಚದರ ಗಜ ಜಾಗ ಸಾಕಾಗುವುದಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಎಲ್ಲಾ ಪ್ರದೇಶಗಳಲ್ಲಿಯೂ 40—60 ಅಡಿ ಇರತಕ್ಕ ನಿವೇಶನ ಕೊಡಬೇಕೆಂದು ನಾವು ಹಂಗಾಮಿಯಾಗಿ ತೀರ್ಮಾನ ತೆಗೆದುಕೊಂಡಿದ್ದೇವೆ.

Sri C. M. ARUMUGAM.—Sir, out of 30,000 families who are without houses, will the Government be pleased to state how many people are without houses in the urban areas.

Sri B. BASAVALINGAPPA.—I am sorry. The figure of 30,000 refers only to Bangalore City. Now, we have got about 3 lakhs families all over the State. We have a programme to distribute a minimum of 50,000 sites before 15th August 1972 and then, before 15th August 1973, we want to cover the rest of the project.

ಶ್ರೀ ಟಿ. ಆರ್. ಶಾಮಣ್ಣ.— ಈಗ ಸರ್ಕಾರದವರು ಬಡವರಿಗೆ ಮನೆಗಳನ್ನು ಕೊಡುತ್ತೇವೆಂದು ನಿರ್ಣಯವನ್ನು ಘೋಷಿಸಿದ ಮೇಲೆ ಬೆಂಗಳೂರಿನ ಸುತ್ತಮುತ್ತಲು ಇರುವ ಸಾವಿರಾರು ಗುಡಿಸಲು ಗಳನ್ನು ತೆಗೆದುಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಈ ಗುಡಿಸಲುಗಳ ವರಿಗೆ ಆ ಜಾಗಗಳನ್ನು ಖಾಯಂ ಮಾಡುತ್ತೀರಾ ಅಥವಾ ಬೇರೆ ಏನಾದರೂ ಏರ್ಪಾಡು ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.— ಅದರ ಬಗ್ಗೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಅದರ ಲೆಕ್ಕವೂ ಅಂದಾಜು ನಮ್ಮಲ್ಲಿ ಈಗ ಇಲ್ಲ. ಅದು ಬಂದ ತಕ್ಷಣ ಈ ಸಮಸ್ಯೆಯನ್ನು ಬಗೆ ಹರಿಸುವುದಕ್ಕೆ ಏನು ಏರ್ಪಾಡು ಮಾಡಬೇಕೋ ಅದನ್ನು ಮಾಡುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಗ್ರಾಮಾಂತರ ಪ್ರದೇಶಗಳಲ್ಲಿ ಸೈಟುಗಳನ್ನು ಕೊಡುವಾಗ ಹರಿಜನರಿಗೆ ಏನಾದರೂ ಹೆಚ್ಚಿನ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದೀರಾ ? ಮತ್ತು ಅಂತಹ ನಿವೇಶನಗಳನ್ನು ಕೊಟ್ಟರೂ ಆ ಜನರು ಮನೆಗಳನ್ನು ಕಟ್ಟದೆ ತೊಂದರೆಗೆ ಒಳಪಟ್ಟ ನಿವೇಶನಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಮೊದಲು ನಮ್ಮ ಮ್ಯೂನೂರು ಸಂಸ್ಥಾನದಲ್ಲಿರತಕ್ಕ ಬಡ ಜನರಿಗೆ ನಿವೇಶನಗಳನ್ನು ಕೊಡಬೇಕೆಂದು ಇದೆ. ಅದರಲ್ಲಿ ಹರಿಜನರೂ ಬರುತ್ತಾರೆ. ಮತ್ತು ಹರಿಜನರು ಬಡವರು, ನಿರ್ಗತಿಕರು ಎಂಬುದು ಎಲ್ಲರಿಗೂ ಗೊತ್ತಿದೆ. ಅವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ವಿಚಾರದಲ್ಲಿ ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡುತ್ತಿದ್ದಾರೆ ಮತ್ತು ಅದು ಸರ್ಕಾರದ ಗಮನದಲ್ಲಿದೆ.

ಶ್ರೀ ಎಚ್. ಎನ್. ಸಿದ್ದಪ್ಪ.—ನಿವೇಶನವನ್ನು ಹಂಚಬೇಕಾದರೆ ಅಲ್ಲಿ ಡಾಕ್ಟರು ಯಾವ ರೀತಿ ಒಂದು ಸರ್ಟಿಫಿಕೇಟ್ ಕೊಡುತ್ತಾರೆ, ಆ ರೀತಿ ಏನಾದರೂ ಆ ಸ್ಥಳದವರದ್ದು ಶಿಫಾರಸು ಆದರೆ ಮಾತ್ರ ಸೈಟುಗಳು ದೊರಯುತ್ತವೆ ಅಲ್ಲದೆ ಬಾಕಿ ಜನರಿಗೆ ದೊರಕುವುದಿಲ್ಲವೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಉತ್ತರ ಕೊಟ್ಟಮೇಲೆ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಅಲ್ಲಿರತಕ್ಕ ಜನರ ಅವಶ್ಯಕತೆಯ ಮೇರೆ ತೀರ್ಮಾನ ತೆಗೆದುಕೊಳ್ಳುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ನಿವೇಶನಗಳನ್ನು ಮತ್ತು ಮನೆಗಳನ್ನು ಕೊಡುವಾಗ ಒಂದು ಜಾತ್ಯಾತೀತ ಮನೋಭಾವನೆಯಿಂದ ಎಲ್ಲಾ ಜಾತಿಗಳವರಿಗೂ ಒಂದೇ ಜಾಗದಲ್ಲಿ ಅಂದರೆ—ಪಕ್ಕ ಪಕ್ಕದಲ್ಲಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ಮತ್ತು ಅದನ್ನೇ ಒಂದು ಉದ್ದೇಶವಾಗಿಟ್ಟುಕೊಂಡು ಒಂದೊಂದು ಕೋಮಿನವರಿಗೆ ಪಕ್ಕ ಪಕ್ಕದಲ್ಲಿ ಸೈಟುಗಳನ್ನು ಕೊಟ್ಟು ಮನೆಗಳನ್ನು ಕಟ್ಟಿಸಿಕೊಡುವ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಸರ್ಕಾರದ ನೀತಿ ಪ್ರಕಾರ ಇನ್ನು ಮೇಲೆ ಹರಿಜನರ ಕೇರಿ, ಲಿಂಗಾಯಿತರ ಕೇರಿ, ಒಕ್ಕಲಿಗರ ಕೇರಿ ಮತ್ತು ಮುಸಲ್ಮಾನರ ಕೇರಿ ಎಂದು ಇರಬಾರದು. ಆದ್ದರಿಂದ ಮಾನ್ಯ ಲಿಂಗಪ್ಪನವರು ಹೇಳಿದ ಹಾಗೆ ಈ ರೀತಿಯ ಭಾವನೆಯನ್ನು ಕೊನೆಗಾಣಿಸಲು ಏನೇನು ಪ್ರಯತ್ನಗಳನ್ನು ಮಾಡಬೇಕೋ, ಅವುಗಳನ್ನು ಮಾಡಿ ತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮನೆ ಇಲ್ಲದ, ಸೈಟು ಇಲ್ಲದ ಕುಟುಂಬಗಳಿಗೆ ಸೈಟುಗಳನ್ನು ವಿಲೇವಾರಿ ಮಾಡುವ ನೀತಿಯಲ್ಲಿ ಕಳೆದ 5 ವರ್ಷಗಳಲ್ಲಿ ಸಿರ್ಸಿ ಮತ್ತು ಸಿದ್ದಾಪುರಗಳಲ್ಲಿ ಸುಮಾರು ಎರಡು ಸಾವಿರ ಸೈಟುಗಳನ್ನು ವಿಂಗಡಣೆ ಮಾಡಿದ್ದಾರೆ. ಅದನ್ನು ಆಗಸ್ಟ್ 15 ರೊಳಗಾಗಿ ವಿಲೇವಾರಿ ಮಾಡಿ ಬಡಜನರಿಗೆ ಮತ್ತು ಹಿಂದುಳಿದವರಿಗೆ ಅನುಕೂಲವನ್ನು ಕಲ್ಪಿಸಿಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಅದನ್ನು ವಿಚಾರ ಮಾಡುತ್ತೇನೆ.

Sri B.B. SAYANAK.—What is the name of the scheme ? When did the scheme come into existence ? How many persons got the advantage of this scheme ?

Sri B. BASAVALINGAPPA.—This is a scheme prepared by the Government of India with 100 per cent assistance for providing house sites for landless workers in rural areas.

Sri B. B. SAYANAK.—How many persons got the advantage of this scheme up till now ?

Sri B. BASAVALINGAPPA.—We have started it now. I have already informed that three lakhs of people would receive the benefit. I am happy that my frieds are very anxious about the implementation programmes of the scheme. We are now collecting statistics from the Deputy Commissioners from all over the State. I may assure the House that before 15th August 1972, we will see tangible results.

ಶ್ರೀ ಎಸ್. ಕರಿಯಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರದ ಜಮೀನು ಇರುತ್ತದೆ, ಗೋಮಾಳ ಇರುತ್ತದೆ, ಬಂಜರು ಜಮೀನೂ ಸಹ ಇರುತ್ತದೆ. ಅಂತಹ ಸ್ಥಳಗಳಲ್ಲಿ ವಾಸಮಾಡತಕ್ಕ ಜನರು ಅಲ್ಲಯೇ ಮನೆಗಳನ್ನು ಕಟ್ಟಿಕೊಳ್ಳುತ್ತೇವೆಂದು ಕೇಳಿದರೆ ಅವನ್ನು ಕೊಡುವುದಕ್ಕೆ ಸರ್ಕಾರಕ್ಕೆ ಏನು ಅಭ್ಯಂತರವಿದೆ ?

Sri B. BASAVALINGAPPA.—I shall be obliged if the hon. Member repeats the question.

Restoration of Tanks in Anekal Taluk

11. Sri M. B. RAMASWAMY (Anekal).—

Will the Minister for Public Works and Electricity be pleased to state:—

(*a*) whether estimates had been prepared long ago, in respect of Bichirakere (Hulimangala), Dyavasamudrakere and Javaregowdana Doddikere in Anekal Taluk ;

(*b*) if so, the estimated amount in each case ;

(*c*) whether these works have been taken up ;

(*d*) if so, when ;

(*e*) if not, the reasons for not taking up these works ?

Sri H. M. CHANNABASAPPA (Minister for Public Works and Electricity).—

(*a*) Yes.

(*b*)

Name of the Tank	*Estimated amount*
1. Bichirakere (Hulimangala).	Rs. 30,000
2. Dyavasamudra	Rs. 20,500
3. Javare Gowdana Doddikere.	Rs. 72,000

(*c*) Restoration of Dyavasamudra tank has been taken up. The other two works have not been taken up.

(*d*) Restoration of Dyavasandra tank was taken up during October 1968.

(*e*) Restoration of Bichirakere (Hulimangala) and construction of Javaregowdanadoddikere have not been taken up on account of the ban imposed on taking up of new works in G. O. No. PWD 69 IFY 71, dated 21st January 1972 and G. O. No. FD 15 BUD 72, dated 11th February 1972.